ತ್ತಿದ್ದಾರೆಯೇ ? ಹಾಗಿದ್ದರೆ ಈ ಸೌಲಭ್ಯವನ್ನು ಎಂ.ಎಸ್.ಕೆ. ಮಿಲ್ಸ್, ಗುಲ್ಬರ್ಗಾದಲ್ಲಿ ಮಾಡುತ್ತಿರುವ ಕೆಲಸಗಾರರಿಗೆ ಕೊಡುತ್ತಿದ್ದಾರೆಯೇ ? ಹಾಗಿದ್ದರೆ ಈ ಸೌಲಭ್ಯವನ್ನು ಎಂ.ಎಸ್.ಕೆ. ಮಿಲ್ಸ್, ಗುಲ್ಬರ್ಗಾದಲ್ಲಿ ಮಾಡುತ್ತಿರುವ ಕೆಲಸಗಾರರಿಗೆ ಏಕೆ ಕೊಡುತ್ತಿಲ್ಲ?

ಶ್ರೀ ಅಜೀಜ್ ಸೇತ್ (ಕಾರ್ಮಿಕ ಸಚಿವರು).—

ಅ. ಕನಿಷ್ಪ ವೇತನ ಕಾನೂನಿನ ಅಡಿಯಲ್ಲಿ ಹತ್ತಿ ಬಟ್ಟೆಯ ಕೈಮಗ್ಗ ಮತ್ತು ವಿದ್ಯುತ್ ಚಾಲಿತ ಮಗ್ಗಗಳ ಉದ್ಯಮದಲ್ಲಿ ಇನ್ನೂ ಕನಿಷ್ಪ ವೇತನವನ್ನು ನಿಗದಿ ಮಾಡಿಲ್ಲ. ಈ ಮಿಲ್ಲುಗಳಲ್ಲಿ ಸದ್ಯದ ವೇತನದ ಕನಿಷ್ಪ ಮಟ್ಟ ಬೇರೆ ಬೇರೆಯಾಗಿದೆ. ಅದಕ್ಕೆ ಕಾರಣವೇನೆಂದರೆ ದಾವಣಗೆರೆ, ಬೆಂಗಳೂರು ಇತ್ಯಾದಿ ಸ್ಥಳಗಳಲ್ಲಿ ಬೆಲೆ ಸೂಚ್ಯಾಂಕಗಳ ಮೇಲೆ ಆಧರಿಸಿರುವ ಬೇರೆ ಬೇರೆ ತುಟ್ಟಿಭತ್ಯದ ದರಗಳೇ ಆಗಿವೆ.

ಆ. ಹೌದು. ಯಲ್ಲಮ್ಮ ಕಾಟನ್ ಮಿಲ್ಸ್, ದಾವಣಗೆರೆ, ಮೈಸೂರು ಸ್ಪಿನ್ನಿಂಗ್ ಮತ್ತು ವೀವಿಂಗ್ ಮ್ಯಾನುಫ್ಯಾಕ್ಚರಿಂಗ್, ಬೆಂಗಳೂರು ಮತ್ತು ಮಿನರ್ವ ಮಿಲ್ಸ್, ಬೆಂಗಳೂರು ಇವು ಹಿಂದೆ 7 ದಿನಗಳ ಕೆಲಸ ಮಾಡುತ್ತಿರಲಿಲ್ಲ. ಈ ಮಿಲ್ಲುಗಳನ್ನು ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್‌ರವರು ವಹಿಸಿಕೊಂಡಮೇಲೆ ಅವುಗಳಲ್ಲಿ 7 ದಿನಗಳ ಕೆಲಸವನ್ನು ಜಾರಿಗೆ ತರಲಾಯಿತು. ಆ ಕಾರಣ ಶೇ. 4ರಷ್ಟು ಹೆಚ್ಚಿನ ವೇತನಮ್ನ ಕೆಲಸಗಾರರಿಗೆ ಕೊಡಲು ಪ್ರಾರಂಭವಾಯಿತು. ಆದರೆ ಗುಲ್ಬರ್ಗಾ ಎಂ.ಎಸ್.ಕೆ. ಮಿಲ್ಸ್‌ನ ಕಾರ್ಮಿಕರು ಆ ಮಿಲ್ಲುಗಳನ್ನು ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್‌ರವರು ವಹಿಸಿಕೊಳ್ಳುವುದಕ್ಕೆ ಮುಂಚೆಯೇ 7 ದಿನಗಳ ಕೆಲಸವನ್ನು ಮಾಡುತ್ತಿದ್ದರು. ಆ ಕಾರಣ ಹೆಚ್ಚಿನ ವೇತನವನ್ನು ಆ ಕೆಲಸಗಾರರಿಗೆ ಕೊಡುತ್ತಿಲ್ಲವೆಂದು ತಿಳಿದುಬಂದಿದೆ.

ಶ್ರೀ ಎಸ್. ಕೆ. ಕಾಂತ್.—ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆ ಕೇಳಿದ್ದುದು 1974ರಲ್ಲಿ ತ್ರಿಪಕ್ಷೀಯ ಸಭೆ ನಡೆದು ಬೇರೆ ಬೇರೆ ಮಿಲ್‌ಗಳಲ್ಲಿ ಬೇರೆ ಬೇರೆ ರೀತಿಯ ತುಟ್ಟಿಭತ್ಯ ಮತ್ತು ಸಂಬಳದಲ್ಲಿ ವ್ಯತ್ಯಾಸವಿದೆ. ಇದು ಒಂದೇ ರೀತಿಯಲ್ಲಿ ಆಗಬೇಕೆಂದು ಆ ಕಮಿಟಿ ತೀರ್ಮಾನ ಮಾಡಿತ್ತು. ಆ ಕಮಿಟಿಯ ತೀರ್ಮಾನದ ಆಧಾರದ ಮೇಲೆ ದಾವಣಗೆರೆ ಮಿಲ್‌ನಲ್ಲಿ ಏನು ಸಂಬಳ ಮತ್ತು ತುಟ್ಟಿಭತ್ಯ ಸಿಗುತ್ತದೆ ಅದೇರೀತಿ ಗುಲ್ಬರ್ಗಾದಲ್ಲಿರತಕ್ಕ ಮಿಲ್‌ಗಳಲ್ಲೂ ಸಿಗುತ್ತದೆಯೇ ? ದಾವಣಗೆರೆ ಮಿಲ್‌ನಲ್ಲಿ ಕಾರ್ಮಿಕರಿಗೆ ಹೆಚ್ಚಿಗೆ ಸಂಬಳ ಸಿಗುತ್ತಿರುವಾಗ ಗುಲ್ಬರ್ಗಾದಲ್ಲಿರತಕ್ಕ ಯಲ್ಲಮ್ಮ ಕಾಟನ್ ಮಿಲ್ಸ್‌ನಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೆ ಸಂಬಳ ಕಡಿಮೆ ಸಿಗುತ್ತದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು ? ಅದೇರೀತಿ ನನ್ನ (ಆ) ಪ್ರಶ್ನೆಗೆ ವಿಚಿತ್ರ ಉತ್ತರ ಬಂದಿದೆ. 7 ದಿನಗಳ ಕೆಲಸವನ್ನು ಜಾರಿಗೆ ತಂದಮೇಲೆ ಶೇಕಡಾ 4 ರಷ್ಟು ಹೆಚ್ಚಿನ ವೇತನವನ್ನು ಕೆಲಸಗಾರರಿಗೆ ಕೊಡಲಾಗುತ್ತಿದೆ ಎಂದು ಹೇಳಿದ್ದಾರೆ. ನ್ಯಾಷನಲ್ ಟೆಕ್ಸ್‌ಟೈಲ್ ಕಾರ್ಪೊರೇಷನ್‌ರವರು ಇದನ್ನು ವಹಿಸಿಕೊಳ್ಳುವುದಕ್ಕೆ ಮುಂಚೆಯೇ 7 ದಿನಗಳ ಕೆಲಸವನ್ನು ಮಾಡುತ್ತಿದ್ದರು. ಆ ಕಾರಣ ಹೆಚ್ಚಿನ ವೇತನವನ್ನು ಆ ಕೆಲಸಗಾರರಿಗೆ ಕೊಡುತ್ತಿಲ್ಲವೆಂದು ಹೇಳಿದ್ದಾರೆ, ಎಲ್ಲಾ ಕಾರ್ಮಿಕರಿಗೆ ಒಂದೇ ರೀತಿಯಲ್ಲಿ ಸಂಬಳ ಕೊಡತಕ್ಕದ್ದು ಸರಿಯಲ್ಲವೆ ?

ಶ್ರೀ ಅಜೀಜ್ ಸೇತ್.—(ಮಾನ್ಯ ಮಂತ್ರಿಗಳು ಉರ್ದು ಭಾಷೆಯಲ್ಲಿ ಉತ್ತರಿಸಿದರು)

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು :

Sub : Construction of Janatha Houses in Ramadurga Taluk.

ಪ್ರ. 1534 ಶ್ರೀ ಫಕೀರಪ್ಪ ಆಲಪ್ಪ ಕೊಪ್ಪದ (ರಾಮದುರ್ಗ).—ಮಾನ್ಯ ಶ್ರೀ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

ಅ. ರಾಮದುರ್ಗ ತಾಲ್ಲೂಕಿನಲ್ಲಿ ಜನತಾ ಮನೆ ನಿರ್ಮಾಣಕ್ಕೆ ಮಂಜೂರಾಗಿರುವ ಹಣವೆಷ್ಟು ? ಮತ್ತು ಎಷ್ಟು ಮನೆಗಳನ್ನು ಎಲ್ಲೆಲ್ಲಿ ನಿರ್ಮಿಸಲು ಉದ್ದೇಶಿಸಲಾಗಿತ್ತು ;